೧-೦೦ ಪಿ. ಎಂ.

(೮) ಕೊಲ್ಲೂರು ಹೊಳೆಗೆ ನಾವುಂದ ಬಡಾಕೆರೆ ರಸ್ತೆಯಲ್ಲಿ ಸೇತುವೆ ರಚಿಸಲು ಆಗ್ರಹ

ಶ್ರೀ ಜಿ. ಎಸ್. ಆಚಾರ್ — ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಸಮುದ್ರ ಸೇರುವ ನದಿಗಳು ಹಲವಾರು. ಅದರಲ್ಲೂ ಪಶ್ಚಿಮ ಘಟ್ಟದಿಂದ ಪಡುಗಡಲ ತಡಿಯ ತನಕದ ಭೂಮಿ ಕಡಿಮೆ ಇರುವ ಭಾಗ ಕುಂದಾಪುರ ತಾಲೂಕಿನ ಬೈಂದೂರು ಕ್ಷೇತ್ರ. ಅಂತೆಯೇ ಅಲ್ಲಿ ಅನೇಕ ನದಿ, ಉಪ ನದಿಗಳಿಂದ ಭೂಭಾಗ ಪ್ರತ್ಯೇಕಿಸಲ್ಪಟ್ಟು ಶತಮಾನಗಳಿಂದ ಜನ ಸಂಚಾರಕ್ಕೆ ತುಂಬ ತೊಂದರೆ.

ಬೈಂದೂರು ಕ್ಷೇತ್ರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು, ಸಮುದ್ರ ಸೇರಿದೆ, ಸಮುದ್ರದ ಹತ್ತಿರವೇ ಬಹುದೂರ ದಕ್ಷಿಣಕ್ಕೆ ಸಾಗಿ ಮತ್ತೆ ಪೂರ್ವ, ದಕ್ಷಿಣ, ಪಶ್ಚಿಮಾಭಿಮುಖವಾಗಿ ಪ್ರವಹಿಸಿ, ಸಮುದ್ರ ಸೇರುವ ಕೊಲ್ಲೂರು ನದಿಯಿಂದಾಗಿ ಆಸೇಕ ಒಳ ನಾಡಿನ ಗ್ರಾಮಗಳಿಗೆ ನೇರ ಸಂಪರ್ಕವಿಲ್ಲ.

ಈ ಭಾಗದ ಜನರ ಬೇಡಿಕೆಗನುಸಾರವಾಗಿ ೧೯೬೫-೬೬ರಲ್ಲಿ ಕೊಲ್ಲೂರು ಹೊಳೆಗೆ ನಾವುಂದ ಬಡಾಕೆರೆ ರಸ್ತೆಯ ಕಿ.ಮೀ. ೧.೬ರಲ್ಲಿ ಸೇತುವೆ ರಚಿಸಲು ಅಂದಾಜು ಪಟ್ಟಿ ಸಿದ್ಧವಾಯಿತು. ಸರಕಾರದ ಮಂಜೂರಾತಿ ದೊರಕಿತು. ಟೆಂಡರ್ ಸಹಾ ಕರೆಯಲ್ಪಟ್ಟಿತು. ಆದರೆ ದೇಶದಲ್ಲಿ ಸಂಭವಿಸಿದ ಪರಕೀಯ ದಾಳಿ, ವಿಷಮ ಸ್ಥಿತಿಯಿಂದಾಗಿ ಕೆಲಸ ಮುಂದುವರಿಯಲೇ ಇಲ್ಲ. ಪರಿಣಾಮವಾಗಿ ಜನ ಕೆಲವೇ ಕಿಲೋಮೀಟರ್ ದೂರದ ರಾಷ್ಟ್ರೀಯ ಹೆದ್ದಾರಿ ತಲುಪುವ ಬದಲು ೨೦-೩೦ ಕಿಲೋಮೀಟರ್ ಸುತ್ತಿ ಬರಬೇಕಾದ ದಾರುಣ ಪರಿಸ್ಥಿತಿ ಇನ್ನೂ ಮುಂದುವರೆದಿದೆ. ಅದೂ ಮಾರಮಂತೆಯ ಬಳಿ ದುರ್ಬಲವಾಗಿರುವ ರಾಷ್ಟ್ರೀಯ ಹೆದ್ದಾರಿ ಎಲ್ಲಿಯಾದರೂ ಒಡೆದು, ನದಿ-ಸಮುದ್ರ ಒಂದಾದರಂತೂ ಪೂರ್ತಿಪ್ಪು ಸಂಕಷ್ಟದ ಪ್ರಸಂಗ ಉಂಟಾಗುತ್ತದೆ.

ಆದಕ್ಕಾಗಿ ಈ ಸೇತುವೆ ಅತಿ ಅವಶ್ಯ. ೨೫ ವರ್ಷಗಳ ಹಿಂದೆ ಮಂಜೂರಾಗಿ ಟೆಂಡರ್ ಕರೆಯಲ್ಪಟ್ಟ ಕೊಲ್ಲೂರು ಸೇತುವೆ ರಚನಾ ಕಾಮಗಾರಿಗೆ ಈ ವರ್ಷ ಬೆಳ್ಳಿಹಬ್ಬ, ಈ ಬೆಳ್ಳಿ ಹಬ್ಬದ ವರ್ಷದಲ್ಲಾದರೂ, ಸರಕಾರ ಸೂಕ್ತ ನಿರ್ಧಾರ ಕೈಗೊಂಡು, ಸೇತುವೆಯ ಕೆಲಸ ಪ್ರಾರಂಭವಾಗಲಿ, ಪವಿತ್ರ ಯಾತ್ರಾಸ್ಥಳವಾದ ಕೊಲ್ಲೂರಿಗೆ ಈ ಸೇತುವೆಯಿಂದಾಗಿ ಸಮೀಪ ಸಂಪರ್ಕ ಕಲ್ಪಿಸಿದ, ಹತ್ತಾರು ಹಳ್ಳಿಗಳ ಸಹಸ್ರಾರು ಜನರಿಗೆ ಶತಮಾನಗಳಿಂದ ವಂಚಿತವಾದ ಸೌಲಭ್ಯ ಒದಗಿಸಿದ ಪುಣ್ಯ ತಮಗೆ ಒದಗಿ ಬರಲಿ ಎಂದು ಸನ್ಮಾನ್ಯ ಲೋಕೋಪಯೋಗಿ ಸಚಿವರನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ ಕೊಲ್ಲೂರು ಹೊಳೆಯು ಕುಂದಾಪುರ ತಾಲ್ಲೂಕಿನ ಬಡಾಕೆರೆ ಮತ್ತು ನಾವುಂದ ಗ್ರಾಮಗಳ ಮಧ್ಯದಲ್ಲಿ ಹರಿಯುತ್ತಿದೆ. ಬಡಾಕೆರೆ ಗ್ರಾಮದ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕಿನ ಮೂರು ಕಡೆಯನ್ನೂ ಈ ಹೊಳೆಯು ಆವೃತ್ತವಾಗಿದ್ದು ಪೂರ್ವ ದಿಕ್ಕಿನಲ್ಲಿ ಮಾತ್ರ ಭೂ ಸಂಪರ್ಕವನ್ನು ಹೊಂದಿದೆ. ಈ ಹೊಳೆಯ ಸುತ್ತ ಮುತ್ತಲ ಗ್ರಾಮಸ್ಥರು, ವಿದ್ಯಾರ್ಥಿಗಳು ದೂರದ ಕುಂದಾಪುರ, ಬೈಂದೂರು ಮುಂತಾದ ಸ್ಥಳಗಳಿಗೆ ಹೋಗಿ ಬರಲು ಈ ಹೊಳೆಯನ್ನು ದೋಣಿ ಮೂಲಕ ದಾಟಿ ಹೋಗುತ್ತಿರುತ್ತಾರೆ. ಮಳೆಗಾಲದಲ್ಲಿ ಈ ಹೊಳೆಯನ್ನು ದಾಟಲು ಬಹಳ ಅನಾನುಕೂಲವಾಗುತ್ತಿದೆ. ಆದುದರಿಂದ ನಾವುಂದ ಬಡಾಕೆರೆ ಗುಡ್ಡೆಯಂಗಡಿ ಕಚ್ಚಾ ರಸ್ತೆಯನ್ನು ಅಭಿವೃದ್ಧಿಪಡಿಸಿ, ಕೊಲ್ಲೂರು ಹೊಳೆಗೆ ಒಂದು ಸೇತುವೆಯನ್ನು ಕಟ್ಟಿಸಿ, ಸರ್ವ ಋತು ರಸ್ತೆಯನ್ನಾಗಿ ಮಾಡಬೇಕೆಂದು ಗ್ರಾಮಸ್ಥರು, ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಬಹಳವಾಗಿ ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ.

ಇದಲ್ಲದೇ, ೧೭ನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಯು, ಆರಬ್ಬೀ ಸಮುದ್ರ ಮತ್ತು ಕೊಲ್ಲೂರು ಹೊಳೆಯ ನಡುವೆ ಸಮುದ್ರ ತೀರಕ್ಕೂ ಹಾಗೂ ಹಳೆಯ ಬದಿಯಲ್ಲಿ ಕಿ.ಮೀ. ೨೬೮ರಿಂದ ಕಿ.ಮೀ. ೨೬೧ರವರೆಗೆ ಹೋಗುತ್ತಿದೆ. ಸಮುದ್ರ ಕೊರೆತವನ್ನು ತಪ್ಪಿಸುವುದಕ್ಕೆ ಈ ರಸ್ತೆಗೆ ಬಂಡೆ ಕಲ್ಲುಗಳ ರಕ್ಷಣಾ ಗೋಡೆಯನ್ನು ಕಟ್ಟಲಾಗಿದ್ದು, ಈ ಭಾಗದ ರಸ್ತೆಯು ಭದ್ರವಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿಯ ಮುಖ್ಯ ಇಂಜಿನಿಯರ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಆದರೂ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಯ ಈ ಭಾಗಕ್ಕೆ ತೊಂದರೆ ಉಂಟಾಗಿ, ಸಂಚಾರಕ್ಕೆ ಅಡಚಣೆಯಾದಲ್ಲಿ ಪ್ರಸ್ತಾವಿತ ನಾವುಂದ ಬಡಾಕೆರೆ ರಸ್ತೆಯು ಈ ರಾಷ್ಟ್ರೀಯ ಹೆದ್ದಾರಿ ಭಾಗಕ್ಕೆ ಪರ್ಯಾಯ ರಸ್ತೆಯಾಗುವುದೇ ಅಲ್ಲದೆ, ಒಳ ಗ್ರಾಮಾಂತರ ಪ್ರದೇಶ ಅಭಿವೃದ್ಧಿಯಾಗುವುದೆಂದು ಅಭಿಪ್ರಾಯ ಪಡಲಾಗಿದೆ.

ಇದನ್ನು ಮಾಡಬೇಕಾದರೆ, ೯ ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವುದು, ಕೊಲ್ಲೂರು ಹೊಳೆಗೆ ಒಂದು ಸೇತುವೆ ನಿರ್ಮಿಸುವುದು ಹಾಗೂ ೩.೧೦ ಕಿ.ಮೀ. ಉದ್ದಕ್ಕೆ ರಸ್ತೆಯನ್ನು ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸೇರುವಂತೆ ಮಾಡುವುದು, ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೊಳಪಡುತ್ತವೆ. ಮೇಲ್ಕಂಡ ಸೇತುವೆಯನ್ನು ಕಟ್ಟುವುದಕ್ಕೂ ಹಾಗೂ ಪೂರಕ ಕಾಮಗಾರಿಗಳನ್ನು ಮಾಡುವುದಕ್ಕೂ ಸುಮಾರು ೧೨೫ ಲಕ್ಷ ರೂ.ಗಳ ಅಂದಾಜು ಬರುತ್ತದೆ. ವಿವರ ಈ ಕೆಳಕಂಡಂತಿದೆ.

ಅ) ಸೇತುವೆ ನಿರ್ಮಾಣಕ್ಕೆ (೧೮೦ ಮೀ. ಉದ್ದ ೭.೫ ಮೀ. ಅಗಲ)	೭೫.೦೦ ಲಕ್ಷ ರೂ.
ಆ) ಸೇತುವೆಯ ಎರಡು ಬದಿ ಕೂಡು ರಸ್ತೆ	೭೫.೦೦ ಲಕ್ಷ ರೂ.
ಇ) ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ರಸ್ತೆ ಸೇರುವ ರಸ್ತೆ ನಿರ್ಮಾಣ	೫.೦೦ ಲಕ್ಷ ರೂ.
ಈ) ನಾವುಂದ-ಬಡಾಕೆರೆ ರಸ್ತೆ ಅಭಿವೃದ್ಧಿ	೧೫.೦೦ ಲಕ್ಷ ರೂ.
ಉ) ಭೂ ಸ್ವಾಧೀನ ಇತ್ಯಾದಿ	೫.೦೦ ಲಕ್ಷ ರೂ.
	೧೨೫.೦೦ ಲಕ್ಷ ರೂ.

ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಈ ಕಾಮಗಾರಿಗಳಿಗೆ ಇಷ್ಟು ಅನುದಾನ ಕೊಡುವ ಸಂದರ್ಭವು ಬಹಳ ಕಡಿಮೆ ಇರುವುದರಿಂದ, ಕೇಂದ್ರ ರಸ್ತೆ ಫಂಡಿನಲ್ಲಿ (ಸಿ.ಆರ್.ಎಫ್) ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಈ ಬಗ್ಗೆ ವಿವರವಾದ ಅಂದಾಜು ಪಟ್ಟಿಯನ್ನು ತಯಾರು ಮಾಡುವಂತೆ ಮುಖ್ಯ ಇಂಜಿನಿಯರ್, ದಕ್ಷಿಣ ವಲಯದವರಿಗೆ ಈಗಾಗಲೇ ಸೂಚನೆಗಳನ್ನು ಸರ್ಕಾರದಿಂದ ನೀಡಲಾಗಿದೆ.

ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕು ಎನ್.ಹೆಚ್, 4ನಲ್ಲಿ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎನ್ನುವವರು ಲಾರಿ ಹರಿದು ಮೃತಪಟ್ಟಿರುವುದು

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕಿನ ಎನ್‌ಹೆಚ್-೪ನಲ್ಲಿರುವ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎಂಬುವವರು ೩೦ ವರ್ಷ ವಯಸ್ಸಾಗಿದ್ದ ಸೈಕಲ್ ಹಿಡಿದು ನಿಂತಿದ್ದು ಸರಿಯಷ್ಟೆ. ಸಾಯಂಕಾಲ ೭ ಗಂಟೆ ಸಮಯದಲ್ಲಿ ದಾರಿಯಲ್ಲಿ ಲಾರಿಯೊಂದು ಚಂದ್ರಹಾಸನ ಮೇಲೆ ಹರಿದು ಚಂದ್ರಹಾಸನು ಸ್ಥಳದಲ್ಲಿಯೇ ಮೃತ ಪಟ್ಟಿದ್ದಾನೆ, ಮತ್ತು ಇಲ್ಲಿಯವರೆಗೂ ಲಾರಿ ಪತ್ತೆಯಾಗಿಲ್ಲ ಮತ್ತು ಲಾರಿಯನ್ನು ಹಿಡಿದಿರುವುದಿಲ್ಲ. ತಾವರೆಕೆರೆ ಪೋಲೀಸರು ಗಮನ ಹರಿಸುತ್ತಿಲ್ಲ. ಆದುದರಿಂದ ಸರಕಾರ ಕೂಡಲೇ ಕ್ರಮ ತೆಗೆದುಕೊಂಡು ಸದರಿ ಲಾರಿಯನ್ನು ಪತ್ತೆ ಹಚ್ಚಬೇಕೆಂದು ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಸದರಿ ಸತ್ತ ವ್ಯಕ್ತಿಯ ಹೆಂಡತಿಯು ಸಧ್ಯ ಗರ್ಭಿಣಿಯಾಗಿದ್ದು ಅಲ್ಲದೆ ಇವರಿಗೆ ಇಪ್ಪರೂ ಮಕ್ಕಳು ಇರುತ್ತವೆ, ಇವರು ಬಹಳ ಬಡ ಕುಟುಂಬದವರಾಗಿದ್ದು ಇವರಿಗೆ ಸರಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

೧೦) ಹುಬ್ಬಳ್ಳಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲಿಗೆ ಸೇರಬಯಸುವ ವಿದ್ಯಾರ್ಥಿಗಳಿಂದ ವಂತಿಗೆ ತೆಗೆದುಕೊಳ್ಳದಿರುವಂತೆ ಒತ್ತಾಯ

ಶ್ರೀ ಪಿ. ಸಿ. ಸಿದ್ದನಗೌಡರ್.—ಹುಬ್ಬಳ್ಳಿ ನಗರದಲ್ಲಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲು ವಂತಿಗೆಯನ್ನು ಪಡೆಯುವರು ಎಂದು ತಿಳಿದು ಬಂದಿದೆ. ಹುಬ್ಬಳ್ಳಿ ನಗರಸಭೆಯ ಸದಸ್ಯರು ಈ ವಿಚಾರದಲ್ಲಿ ಧರಣಿ ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ತಕ್ಷಣ ವಂತಿಗೆ ನಿಲ್ಲಿಸಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.